# IN THE COURT OF THE ADDL. SENIOR CIVIL JUDGE & JMFC., GUBBI

# **OS – 126/2022**

Witness present and duly sworn on : 17.04.2025.

Further cross Examination: by Counsel for Defendant No.1 to 3 :

ನನ್ನ ತಾಯಿಯ ಹೆಸರು ಮಂಗಳಮ್ಮ. ನನ್ನ ತಾಯಿಗೆ ಈಗ 45 ವರ್ಷ ವಯಸ್ಸು. ನನ್ನ ತಾಯಿ ಈಗ ಅಮರಜ್ಯೋತಿ ನಗರ ತುಮಕೂರಿನಲ್ಲಿವಾಸ ಇದ್ದಾರೆ. ನಾನು ನನ್ನ ತಾಯಿಯೊಂದಿಗೆ ವಾಸ ಇದ್ದೇನೆ. 1 ನೇ ಪ್ರತಿವಾದಿಯ ಮಗಳು ಮರಣ ಹೊಂದಿದ್ದಾರೆಂದು ತೋರಿಸಲು ನ್ಯಾಯಾಲಯದಲ್ಲಿ ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. 4 ನೇ ಪ್ರತಿವಾದಿಯ ತಾಯಿ ಯಾವಾಗ ಮರಣ ಹೊಂದಿದ್ದಾರೆಂದು ತೋರಿಸಲು ನಾನು ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. 4 ನೇ ಪ್ರತಿವಾದಿಯು ಬೊಮ್ಮನಹಳ್ಳಿ ಪಾಳ್ಯದಲ್ಲಿ ವಾಸ ಇದ್ದಾರೆ. 2 ಮತ್ತು 3 ನೇ ಪ್ರತಿವಾದಿಗಳು ಅಜ್ಜಿಯ ಹೆಸರಿನಿಂದ ಶಿವಣ್ಣ ರವರ ಹೆಸರಿಗೆ ದಾಖಲೆಗಳನ್ನು ಸೃಷ್ಟಿಸಿದ್ದಾರೆ. 4 ನೇ ಪ್ರತಿವಾದಿಯ ವಿಳಾಸ ನಾನು ಹೇಳಿದಂತೆ ವಾದ ಪತ್ರಕ್ಕೆ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ 4 ನೇ ಪ್ರತಿವಾದಿಯ ವಿಳಾಸವನ್ನು ಬೊಮ್ಮನಹಳ್ಳಿ ಪಾಳ್ಯ ಎಂದು ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ವಡ್ಡರಹಟ್ಟಿ ಮತ್ತು ಬೊಮ್ಮನಹಳ್ಳಿ ಪಾಳ್ಯ ಒಂದೇ ಊರಾಗಿದ್ದು, ಒಂದು ರಸ್ತೆಯ ಅಂತರ ಇರುತ್ತದೆ. ಸದರಿ ಬೊಮ್ಮನಹಳ್ಳಿ ವಿಳಾಸವನ್ನು ವಾದ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ.

3 ನೇಪ್ರತಿವಾದಿಯು ಕುಣಿಗಲ್ ನ್ಯಾಯಾಲಯದಲ್ಲಿ ಆಗಿರುವ ರಾಜಿ ಪತ್ರಕ್ಕೆ ಆಕ್ಷೇಪಣೆ ಇದೆ ಎಂದು ನನ್ನ ಮುಂದೆ ಹೇಳಿರುವುದಿಲ್ಲ. ಕುಣಿಗಲ್ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಗಳಿಗೆ ಸಮವಾಗಿ ಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಾವು ಅವರ ಕುಟುಂಬಕ್ಕೆ ಸೇರಿರುವುದಿಲ್ಲ ಎಂದು ಹೇಳಿರುವ ವಿಚಾರ ನನಗೆ ಗೊತ್ತಿಲ್ಲ. 2017 ರ ನೊಂದಾಯಿತ ವಿಭಾಗ ಪತ್ರದಂತೆ ದಾಖಲೆಗಳು ಬಂದಿದ್ದು ಅವರುಗಳು ಬಂದಂತಹ ಆಸ್ತಿಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ವಿಭಾಗದಂತೆ ಪಹಣಿಗಳು ಬಂದಿವೆ ಎಂದರೆ ಆ ರೀತಿ ಬಂದಿರುವ ದಾಖಲೆಗಳನ್ನು ಈಗ ಬದಲಾವಣೆ ಮಾಡಿಕೊಂಡಿದ್ದಾರೆ. 2017 ವಿಭಾಗದಂತೆ ಪಹಣಿಗಳು ಬಂದಿರುವ ವಿಚಾರ ನನಗೆ ಗೊತ್ತಿದೆ. ಸದರಿ ವಿಭಾಗದಂತೆ ಅವರವರು ಬಂದಂತಹ ಆಸ್ತಿಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಆದ ಕಾರಣ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಒಂದೇ ಸೂರಿನಡಿಯಲ್ಲಿ ವಾಸ ಇದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಯು ಬೊಮ್ಮನಹಳ್ಳಿ ಯ ವಡ್ಡರಹಟ್ಟಿಯಲ್ಲಿ ವಾಸ ಇದ್ದಾರೆ. ಪ್ರತಿವಾದಿಗಳು ಅವರ ವಂಶಸ್ಥರು ನಮ್ಮ ಪರವಾಗಿ ಯಾವುದೇ ದಾಖಲೆಯನ್ನು ಮಾಡಿಲ್ಲ. 2001 ರಲ್ಲಿ ನನಗೆ ಸುಮಾರು 19 ವರ್ಷ ವಯಸ್ಸು. ಯಾವ ರೀತಿ ಮಾಡಬೇಕೆಂದು ಗೊತ್ತಿಲ್ಲದೆ ಇದ್ದ ಕಾರಣ 2022 ರವರೆಗೆ ಯಾವುದೇ ದಾವೆಯನ್ನು ಸಲ್ಲಿಸಿರಲಿಲ್ಲ. ನನ್ನ ತಾಯಿ ಜೀವಂತ ಇದ್ದಾರೆ. ಈ ದಾವೆಯನ್ನು ಸಲ್ಲಿಸುವ ಮೊದಲು ನನ್ನ ತಾಯಿ ಮಕ್ಕಳಿಗಾಗಿ ವಿಭಾಗ ಕೋರಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳೊಂದಿಗೆ ನಮ್ಮ ಸಂಭಂದ ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ವಾದ ಪತ್ರಕ್ಕೆ ಪೂರ್ವಕವಾಗಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ.

ಸರ್ವೆ ನಂ.112/1 ರ ಪಹಣಿ ಪತ್ರಿಕೆಯಲ್ಲಿ ಪಿತ್ರಾರ್ಜಿತ ಎಂದು ಆಸ್ತಿ ಎಂದು ನಮೂದು ಇಲ್ಲ ಎಂದರೆ ಸರಿ. OS No.518/2022 ದಾವೆಯಲ್ಲಿ 3 ನೇ ಪ್ರತಿವಾದಿಯು ಸರ್ವೆ ನಂ.112/1 ಆಸ್ತಿಯು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಒಪ್ಪಿಕೊಂಡಿದ್ದಾರೆ ಎಂದರೆ ನನ್ನ ತಂದೆಗೆ ತಿಳುವಳಿಕೆ ಇರುವುದಿಲ್ಲ ಮತ್ತು ಒಪ್ಪಿಕೊಂಡಿರುವ ಬಗ್ಗೆ ನಮಗೆ ಗೊತ್ತಿಲ್ಲ. ಸದರಿ ರಾಜಿಪತ್ರದ ಬಗ್ಗೆ ನಮಗೆ ಗೊತ್ತಿದೆ ಎಂದು ಈ ದಾವೆಯಲ್ಲಿ ಹೇಳಿದ್ದೇನೆಂದರೆ ಸರಿ. ನಾವು ಅಥವಾ ನಮ್ಮ ತಾಯಿ ಒಟ್ಟು ಕುಟುಂಬದ ಆಸ್ತಿಗಳ ತೆರಿಗೆ ಪಾವತಿ ಮಾಡಿಲ್ಲ. ನಮ್ಮ ಮತ್ತು ಪ್ರತಿವಾದಿಗಳ ವಿಳಾಸದ ಹೊಂದಣಿಕೆ ಇಲ್ಲ ಎಂದರೆ ಸರಿ. ನನ್ನ ತಾಯಿ ಮತ್ತು 3 ನೇ ಪ್ರತಿವಾದಿಯ ವಿಳಾಸ ಒಂದೇ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಪಿತ್ರಾರ್ಜಿತ ಆಸ್ತಿಯ ಬಗ್ಗೆ ಭಾಗ ಬರಬೇಕೆಂದು ಪ್ರತಿವಾದಿಗಳ ವಿರುದ್ದ ಯಾವುದೇ ದಾವೆ ಹೂಡಿಲ್ಲ ಎಂದರೆ ಸರಿ. ನನ್ನ ತಾಯಿ 3 ನೇ ಪ್ರತಿವಾದಿಯಿಂದ ವಿವಾಹ ವಿಛೇದನೆ

ಮತ್ತು ಜೀವನಾಂಶ ಪಡೆದಿರುವುದಿಲ್ಲ. ನನ್ನ ತಾಯಿಯು ಪ್ರತಿವಾದಿಗಳ ಕುಟುಂಬದವರೊಂದಿಗೆ ಕೌಟುಂಬಿಕ ಸಂಭಂದ ಇಲ್ಲದೆ ಇದ್ದ ಕಾರಣ ಅವರು ಯಾವುದೇ ಕಾನೂನು ರೀತಿಯ ಪ್ರಕರಣಗಳನ್ನು ಹೂಡಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ತಾಯಿಯ ಹೆಸರು ಮತ್ತು ವಿಳಾಸ ಹೇಳಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಐಟಂನಂ.1 ಆಸ್ತಿಯ ಚಕ್ಕುಬಂದಿಯಲ್ಲಿ ಯಾರು ಇದ್ದಾರೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ಪಂಚಾಯ್ತಿದಾರರ ಹೆಸರುಗಳು ರಂಗಸ್ವಾಮಿ, ಮೂಡಲಯ್ಯ ಮತ್ತು ಗಂಗಭೈರ. ಅವರ ಹೆಸರುಗಳನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಪ್ರತಿವಾದಿಗಳು ಆಸ್ತಿಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾರೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ.

Further cross Examination: by Counsel for Defendant No.4. :

Deferred as counsel prays time.

(Typed to my dictation in open court)

R.O.I & A.C.

Addl. Senior Civil Judge and
JMFC., Gubbi